ಕರ್ನಾಟಕ ವಿಧಾನಸಭೆ

ಬುಧವಾರ 05ನೇ ಏಪ್ರಿಲ್ 2006ರಂದು

ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 10 ಗಂಟೆ 27 ನಿಮಿಷಕ್ಕೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ಕೃಷ್ಣರವರು) ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು.

1. ಅಧ್ಯಕ್ಷರ ಅಪ್ಪಣೆ ಮೇರೆಗೆ

ಅ. ವಿಷಯ : ಕಳಸಾ–ಬಂಡೂರಿ ನಾಲಾ ನೀರಿನ ಸಮಸ್ಯೆ ಬಗ್ಗೆ.

ಶ್ರೀ ಎನ್. ಧರ್ಮಸಿಂಗ್ (ವಿರೋಧಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ನೆನ್ನೆ ದಿವಸ ನಡೆದಂಥ ಮುಖ್ಯಮಂತ್ರಿಗಳ ಸಭೆಯಲ್ಲಿ ನಮ್ಮ ರಾಜ್ಯದ ಮುಖ್ಯಮಂತ್ರಿಗಳೂ ಸಹ ಭಾಗವಹಿಸಿದ್ದಾರೆ. ಕಳಸಾ–ಬಂಡೂರಿ ನಾಲಾದ ನೀರಿನ ಸಮಸ್ಯೆ ಏನಿದೆ ಅದು ಇನ್ನೂ ಇತ್ಯರ್ಥವಾಗಿಲ್ಲವೆಂದು ಪತ್ರಿಕೆಗಳಲ್ಲಿ ಬಂದಿದೆ. ಆ ಒಂದು ಸಭೆಗೆ ಮಾನ್ಯ ಮುಖ್ಯಮಂತ್ರಿಗಳು ಮಾನ್ಯ ಕಾನೂನು ಮಂತ್ರಿಗಳು ಹಾಗೂ ಮಾನ್ಯ ನೀರಾವರಿ ಸಚಿವರೂ ಕೂಡ ಹೋಗಿದ್ದರು. ಅಲ್ಲಿ ನಡೆದಂಥ ಮುಖ್ಯಮಂತ್ರಿಗಳ ಸಭೆಯಲ್ಲಿ ಇವರು ಭಾಗವಹಿಸಿರುವುದಕ್ಕೆ ನಮ್ಮದೇನೂ ಅಭ್ಯಂತರವಿಲ್ಲ. ಆದರೆ, ಇದು ಈ ರಾಜ್ಯಕ್ಕೆ ಸಂಬಂಧಪಟ್ಟಂಥ ವಿಷಯ. ಇತ್ತೀಚಿನ ದಿವಸಗಳಲ್ಲಿ ಈ ಸರ್ಕಾರಕ್ಕೆ ಏನಾಗಿದೆ ಎಂಬುದು ಗೊತ್ತಿಲ್ಲ. ಅಂದರೆ ಈ ಎಲ್ಲಾ ಸಮಸ್ಯೆಗಳ ಬಗ್ಗೆ ಯಾವಾಗಲಾದರೂ ಕೂಡ ವಿರೋಧಪಕ್ಷದವರ ಜೊತೆ ಸಮಾಲೋಚನೆ ಮಾಡತಕ್ಕಂಥ ಪ್ರಯತ್ನ ಮಾಡಿಲ್ಲ. ಕಳಸಾ–ಬಂಡೂರಿ ನಾಲಾ ವಿಷಯಕ್ಕೆ ಸಂಬಂಧಪಟ್ಟಂತೆ ಆಗಿನ ಜಲಸಂಪನ್ಮೂಲ ಸಚಿವರಾಗಿದ್ದಂಥ ಶ್ರೀ ಮಲ್ಲಿಕಾರ್ಜುನ ಖರ್ಗೆಯವರು ಮಾನ್ಯ ಮಾಧುಸ್ವಾಮಿರವರು ಮತ್ತು ಮಾನ್ಯ ಶ್ರೀರಾಮ್‌ರೆಡ್ಡಿಯವರು ಹಾಗೂ ಮಾನ್ಯ ಪ್ರಿಯರಂಜನ್‌ದಾಸ್ ಮುನ್ಸಿರವರು ಇಲ್ಲಿಗೆ ಬಂದಂಥ ಸಂದರ್ಭದಲ್ಲಿ ಮಾತನಾಡಿದ್ದಾರೆ. ಮತ್ತೆ ಬೆಳಗಾಂ ಜಿಲ್ಲೆಯ ಶಾಸಕರನ್ನೂ ಸಹ ಕರೆದುಕೊಂಡು ಹೋಗಿ ಅವರ ಜೊತೆ ಮಾತನಾಡಿದ್ದಾರೆ. ಮತ್ತೆ ದೆಹಲಿಗೆ ಕೂಡ ಅವರು ಹೋಗಿ ನಮ್ಮ ಕೇಂದ್ರದ ನಾಯಕರಾಗಿರುವ ಆಸ್ಕರ್ ಫರ್ನಾಂಡಿಸ್ ಮಧ್ಯಸ್ಥಿಕೆಯಲ್ಲಿಯೂ ಕೂಡ ಇದರ ಬಗ್ಗೆ ಮಾತನಾಡಿದ್ದಾರೆ. ಗೋವಾ ರಾಜ್ಯದಲ್ಲಿ ಬಿಜೆಪಿ ಸರ್ಕಾರ ಇದ್ದಂಥ ಸಂದರ್ಭದಲ್ಲಿ ಮತ್ತು ಕೇಂದ್ರದಲ್ಲಿ ಎನ್‌ಡಿಎ ಸರ್ಕಾರ ಇದ್ದಂಥ ಸಂದರ್ಭದಲ್ಲಿಯೂ ಕೂಡ ಈ ಒಂದು ಸಮಸ್ಯೆಯನ್ನು ಸರಿಯಾದ ರೀತಿಯಲ್ಲಿ ಬಗೆಹರಿಸಿಲ್ಲ. ಮತ್ತೆ ನಾನು ಈ ರಾಜ್ಯದ ಮುಖ್ಯಮಂತ್ರಿಯಾದ ಮೇಲೆ ಆಗ ಇದ್ದಂಥ ವಿರೋಧಪಕ್ಷದ

ನಾಯಕರಾಗಿದ್ದಂಥ ಮಾನ್ಯ ಯಡಿಯೂರಪ್ಪನವರು ಮತ್ತು ಮಾನ್ಯ ಜಗದೀಶ್‌ಶೆಟ್ಟರ್‌ರವರು ಇದರ ಬಗ್ಗೆ ಪ್ರಸ್ತಾಪ ಮಾಡಿದ್ದರು. ನೀವು ಇದನ್ನು ಮಾಡಲೇಬೇಕೆಂದು ಹುಬ್ಬಳ್ಳಿಯಲ್ಲಿ ಒಂದು ದೊಡ್ಡ ರ್‍ಯಾಲಿ ಕೂಡ ಆಯಿತು. ಅದರಲ್ಲಿ ಮಾನ್ಯ ಬಸವರಾಜ್ ಬೊಮ್ಮಾಯಿರವರು ಮತ್ತು ಮಾನ್ಯ ಬಸವರಾಜ್ ಹೊರಟ್ಟಿರವರೂ ಕೂಡ ಇದ್ದಿರಬಹುದು. ನಿಜವಾಗಿಯೂ ಕೂಡ ಇದೊಂದು ಬೃಹತ್ ಆದ ಸಮಸ್ಯೆ. ಇಲ್ಲಿ ಏನು ಹರಿಯುವ ನೀರು ಸಮುದ್ರದ ಪಾಲಾಗುತ್ತಿದೆ, ಆ ಒಂದು ನೀರನ್ನು ಸಂಗ್ರಹ ಮಾಡಿ ಬೆಳಗಾಂ ಮತ್ತು ಹುಬ್ಬಳ್ಳಿಗೆ ಕುಡಿಯುವ ನೀರಿಗೆ ಈ ನೀರನ್ನು ಕೊಡಬೇಕೆಂಬುದು ನಮ್ಮ ವಾದ. ಇದರ ಬಗ್ಗೆ ಒಂದು ತೀರ್ಮಾನ ತೆಗೆದುಕೊಳ್ಳುವುದಕ್ಕೆ 15 ದಿವಸ ಸಮಯ ಬೇಕೆಂದು ಪ್ರೊ. ಸೋಜ್‌ರವರು ಹೇಳಿದ್ದಾರೆ. ಮತ್ತೆ ಮುಖ್ಯಮಂತ್ರಿಗಳ ಸಭೆಗೆ ನಮ್ಮ ಮುಖ್ಯಮಂತ್ರಿಗಳೂ ಸಹ ಹೋಗಿದ್ದರು. ಆದರೆ talks are failed - ಎಂದು ಪತ್ರಿಕೆಗಳಲ್ಲಿ ಬಂದಿದೆ. ಆದ್ದರಿಂದ ಇದು ಈ ರೀತಿಯಾಗಬಾರದು. ನಾನು ಹೇಳುವುದೇನೆಂದರೆ, ನೀವು ಅಲ್ಲಿಗೆ ಹೋಗುವುದಕ್ಕಿಂತ ಮುಂಚೆ ನಮ್ಮಗಳ ಜೊತೆ ಸಮಾಲೋಚನೆ ಮಾಡಿ ಹೋಗಬೇಕಾಗಿತ್ತು. ಮತ್ತೆ ಅಲ್ಲಿಂದ ಬಂದ ಮೇಲೂ ಕೂಡ ಸರ್ವಪಕ್ಷಗಳ ಮತ್ತು ಎಲ್ಲಾ ವಿರೋಧಪಕ್ಷಗಳ ನಾಯಕರುಗಳ ಸಭೆ ಕರೆದು, ಈಗ ಏನಾಗಿದೆ ಸಧ್ಯದ ವಿದ್ಯಮಾನ ಏನು ಮತ್ತೆ ಮುಂದೆ ಯಾವ ರೀತಿಯಾಗಿ ಮುಂದುವರಿಸಲಾಗುತ್ತಿದೆ ಎನ್ನತಕ್ಕಂಥ ವಿಷಯ ತಿಳಿಸಬೇಕಾಗಿತ್ತು. ಏಕೆಂದರೆ, ಇದು ಈ ರಾಜ್ಯಕ್ಕೆ ಸಂಬಂಧಪಟ್ಟಂಥ ವಿಚಾರವಾಗಿದೆ. ಏನಾಗಿದೆ, ಏನು ವಿದ್ಯಮಾನ ಇದೆ ತಾವು ಹೇಗೆ ಮುಂದುವರೆಸುತ್ತೀರಿ ಎನ್ನುವಂಥದ್ದು ಇದು ರಾಜಕೀಯಕ್ಕೆ ಸಂಬಂಧಪಟ್ಟಂಥದ್ದು. ನಾವು ಮಾನ್ಯ ಮುಖ್ಯ ಮಂತ್ರಿಗಳಿಗೆ ಕೇಳಬೇಕೆಂದು ಇದ್ದೆವು. ಅದರ ನಿಯೋಗದಲ್ಲಿ ನಮ್ಮ ಬಸವರಾಜ ಹೊರಟ್ಟಿಯವರೂ ಕೂಡ ಹೋಗಿದ್ದಾರೆ. ಅದಕ್ಕೆ ಇವತ್ತಿನ ದಿವಸ ಸರ್ಕಾರದಿಂದ ಒಂದು ಸ್ಪಷ್ಟವಾದ ಉತ್ತರ ಬೇಕು. ಯಾವುದಾದರೂ ಇಂತಹ ಸಮಸ್ಯೆಗಳ ಬಗ್ಗೆ ನಾವು ಹಿಂದೆ ಮಾನ್ಯ ಪ್ರಧಾನ ಮಂತ್ರಿಗಳ ಬಳಿಗೆ ಹೋದಾಗ ಮಾನ್ಯ ಯಡಿಯೂರಪ್ಪನವರು ಇದ್ದರು ಎಲ್ಲರೂ ಕೂಡ ಇದ್ದರು. ಹಾಗೂ ಅನಂತ ಕುಮಾರ್‌ರವರಿಗೂ ಚರ್ಚೆಯಲ್ಲಿ ಭಾಗವಹಿಸಲು ಅವಕಾಶವನ್ನು ನಾನು ಕಲ್ಪಿಸಿಕೊಟ್ಟಿದ್ದೆ. ಇದೆಲ್ಲಾ ಪ್ರಧಾನ ಮಂತ್ರಿಗಳ ಸಮ್ಮುಖದಲ್ಲಿ ಬಗೆಹರಿಸತಕ್ಕಂಥ ವಿಷಯ. ಈಗ ಮಾನ್ಯ ಜಗದೀಶ್ ಶೆಟ್ಟರ್‌ರವರು ಬರುತ್ತಿದ್ದಾರೆ. ನಾನು ಕಳಸಾ–ಬಂಡೂರಿ ಬಗ್ಗೆ ಹೇಳುತ್ತಿದ್ದೇನೆ. ಕಳಸಾ–ಬಂಡೂರಿ ಬಗ್ಗೆ ಮಾನ್ಯ ಜಗದೀಶ್ ಶೆಟ್ಟರ್‌ರವರು

ವಿರೋಧ ಪಕ್ಷದಲ್ಲಿದ್ದಾಗ ಬಹಳ ಪ್ರತಿಪಾದನೆ ಮಾಡಿದ್ದಾರೆ. ನಿನ್ನೆ ದಿವಸ ಏನು ಒಂದು ನಿಯೋಗ ಹೋಗಿತ್ತು ಹಾಗೂ ಮಾನ್ಯ ಮುಖ್ಯಮಂತ್ರಿಗಳ ಸಭೆಯಲ್ಲಿ ಏನಾಗಿದೆ; ಪ್ರೊ. ಸೈಫುದ್ದೀನ್ ಸೋಜ್‌ರವರು ಏನು ಮಾಡಿದ್ದಾರೆ. ಮುಂದಿನ ನಿಮ್ಮ ಕ್ರಮ ಏನು ಎಂಬುದನ್ನೂ ಈ ಸದನಕ್ಕೆ ತಿಳಿಸಬೇಕೆಂದು ನಾನು ಕೇಳಿಕೊಳ್ಳುತ್ತಿದ್ದೇನೆ.

ಅಧ್ಯಕ್ಷರು : ಅವರು ಉತ್ತರವನ್ನು ಹೇಳಲಿ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಅಧ್ಯಕ್ಷರೆ, ಒಂದು ನಿಮಿಷ, ಮಾನ್ಯ ವಿರೋಧ ಪಕ್ಷದ ನಾಯಕರು, ಈ ಸದನದಲ್ಲಿ ಕಳಸಾ–ಬಂಡೂರಿಯ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ, ಅವರ ಪ್ರಸ್ತಾಪಕ್ಕೆ ನಾನು ಧ್ವನಿಯನ್ನು ಗೂಡಿಸಿ ಇದು ಬಹಳ ಅತ್ಯಂತ ಗಂಭೀರವಾದಂಥ ಪ್ರಶ್ನೆ. ಈ ಕಳಸಾ–ಬಂಡೂರಿಯ ಬಗ್ಗೆ ಮಾತುಕತೆಗೆ ಹೋಗುವ ಮುಂಚೆ ಹಿಂದಿನ ಸರ್ಕಾರಗಳಲ್ಲಿ ನಡೆದುಕೊಂಡಿರತಕ್ಕಂಥ ರೀತಿ ನೀತಿಗಳು ಪ್ರತಿ ಯಾವುದೇ ಸಂದರ್ಭದಲ್ಲಿ ರಾಜ್ಯದ ಸಮಸ್ಯೆಗಳು ಬಂದಾಗ ಎಲ್ಲಾ ವಿರೋಧ ಪಕ್ಷಗಳ ಮುಖಂಡರುಗಳ ಜೊತೆಯಲ್ಲಿ ಮಾತುಕತೆ ಆಡತಕ್ಕಂಥದ್ದು ಅಲ್ಲದೆ ನಿಯೋಗವನ್ನು ಕರೆದುಕೊಂಡು ಹೋಗತಕ್ಕಂಥದ್ದು ಈ ತರಹ ಮೊದಲಿನಿಂದಲೂ ನಡೆದುಕೊಂಡು ಬಂದಿರತಕ್ಕಂಥದ್ದು. ಬಹುಶಃ ಹೊಸ ಸರ್ಕಾರ ಬಂದಮೇಲೆ ಎಲ್ಲೋ ಒಂದು ಕಡೆ ವಿರೋಧ ಪಕ್ಷದವರನ್ನು ಕತ್ತಲೆಯಲ್ಲಿಟ್ಟಿದ್ದಾರೆ. ಎಂಬ ಭಾವನೆ ಬಂದಿದೆ. ತಾವೇ ಇದನ್ನು ಸಂಪೂರ್ಣವಾಗಿ ಬಗೆಹರಿಸತಕ್ಕಂಥವರು ಇನ್ನು ಯಾರೂ ಇಲ್ಲ ಎನ್ನತಕ್ಕಂಥ ಭಾವನೆ ಬರತಕ್ಕಂಥ ವಿಚಾರವಾಗಿದೆ. ನಿನ್ನೆ ಮತ್ತು ಇವತ್ತಿನ ದಿವಸ ಕಳಸಾ–ಬಂಡೂರಿ ಬಗ್ಗೆ ಪತ್ರಿಕೆಯಲ್ಲಿ ನೋಡಿದ್ದೇವೆ. ಪೂರ್ಣ ವಿಫಲವಾಗಿದೆ ಎಂದು ಹೇಳಿ; ಈ ತರಹ ವಿಫಲವಾದಾಗ ಆ ಭಾಗದ ಜನರ ಪರಿಸ್ಥಿತಿ ಏನು? ಈ ಪರಿಸ್ಥಿತಿಯಲ್ಲಿ ಒಂದು ತರಹ ಬರಸಿಡಿಲು ಬಡಿದಂತಾಗಿದೆ. ಹುಬ್ಬಳ್ಳಿ ಇರಬಹುದು, ಧಾರವಾಡ ಇರಬಹುದು ಮತ್ತು ಸುತ್ತ ಮುತ್ತಲೂ ಇರತಕ್ಕಂಥ ಹಳ್ಳಿಗಳ ವ್ಯವಸ್ಥೆ ಇರಬಹುದು. ಅದೂ ಅಲ್ಲದೆ ಗೋವಾ ಸರ್ಕಾರ ಒಂದೇ ರೀತಿಯಲ್ಲಿ ಸರ್ಕಾರ ಸಮರವನ್ನೇ ತೆರೆಮರೆಯಲ್ಲಿ ಸಾರಿದ್ದಾರೆ. ಇದಕ್ಕೆ ಸರ್ಕಾರ ಪ್ರಾಮಾಣಿಕವಾಗಿ ಎಲ್ಲಾ ವಿರೋಧ ಪಕ್ಷದವರ ಸಲಹೆಯನ್ನು ತೆಗೆದುಕೊಳ್ಳಬೇಕು. ಇದರ ಬಗ್ಗೆ ಪ್ರಾಮಾಣಿಕವಾಗಿ ಏನು ಮಾಡುತ್ತಿದ್ದೀರಿ. ಮುಂದೆ ನಿಮ್ಮ ಕಾರ್ಯಕ್ರಮ ಏನು? ಗೋವಾ ಸರ್ಕಾರದವರು ಅವರ

ಹಠಮಾರಿತನ ನಿಲ್ಲಿಸದಿದ್ದರೆ ನಾವು ಏನು ಮಾಡಬೇಕು ಎನ್ನುವುದನ್ನು ತಮ್ಮ ಸ್ಪಷ್ಟವಾದ ನಿಲುವನ್ನು ಈ ಸಭೆಯಲ್ಲಿ ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಜಿ.ವಿ. ಶ್ರೀರಾಮ್‌ರೆಡ್ಡಿ (ಬಾಗೇಪಲ್ಲಿ) : ಮಾನ್ಯ ಅಧ್ಯಕ್ಷರೆ, ಈ ಸಭೆಗೆ ಹೋಗುವುದಕ್ಕೆ ಮೊದಲು, ಸಭೆಯಲ್ಲಿ ವಿರೋಧ ಪಕ್ಷದ ನಾಯಕರು, ನಾವು ಎಲ್ಲಾ ಸೇರಿ ಪ್ರಸ್ತಾಪವನ್ನು ಮಾಡಿದ್ದೆವು. ಇದಕ್ಕೆ ಹೋಗುವ ಮೊದಲು ಇಲ್ಲಿರತಕ್ಕಂಥ ಎಲ್ಲಾ ರಾಜಕೀಯ ಪಕ್ಷಗಳ ಮುಖಂಡರುಗಳ ಅಭಿಪ್ರಾಯವನ್ನು ತೆಗೆದುಕೊಂಡು ಹೋಗಬೇಕು ಎಂದು. ಏಕೆಂದರೆ ಇದೊಂದು ಬಹಳ ಗಂಭೀರವಾದಂಥ ಪ್ರಶ್ನೆ. ಆ ಯೋಜನೆಯನ್ನು ಕೇಂದ್ರ ಸರ್ಕಾರವೇ ತಡೆಹಿಡಿದಿರತಕ್ಕಂಥದ್ದು. ಕೋರ್ಟ್ ತಡೆಹಿಡಿದಿಲ್ಲ, ಯಾವುದೇ ಲೀಗಲ್‌ದಿಂದ ಅದು ನಿಂತಿಲ್ಲ. ಕೇಂದ್ರ ಸರ್ಕಾರ ಯಾವ ಕಾರಣಕ್ಕೋಸ್ಕರ ತಡೆಹಿಡಿದಿದ್ದಾರೆ ಎನ್ನುವುದನ್ನು ಯಾರೂ ಎಲ್ಲೂ ಹೇಳಿಲ್ಲ. ಗೋವಾ ಸರ್ಕಾರದವರು ತಕರಾರು ಮಾಡಿದ್ದಕ್ಕೆ ತಡೆಹಿಡಿದು ಬಿಟ್ಟರೆ, ಪ್ರತಿಯೊಂದು ರಾಜ್ಯವೂ ಒಂದೊಂದು ತಕರಾರನ್ನು ಮಾಡಿದರೆ ಎಲ್ಲದ್ದಕ್ಕೂ ತಡೆಹಿಡಿಯುವುದಕ್ಕಾಗುವುದಿಲ್ಲ. ಕೇಂದ್ರ ಸರ್ಕಾರ ತಡೆಹಿಡಿದಿರತಕ್ಕಂಥ ಸಂದರ್ಭದಲ್ಲಿ, ಕೇಂದ್ರ ಸರ್ಕಾರದ ಮೇಲೆ ಹಿಂದೆ ಎರಡು-ಮೂರು ಸಲ ಸರ್ವಪಕ್ಷಗಳ ನಿಯೋಗ ಹೋಗಿ ಒತ್ತಾಯವನ್ನು ಹಾಕಿ ಬಂದಿದ್ದೇವೆ; ಎಲ್ಲವನ್ನೂ ಮಾಡಿದ್ದೇವೆ. ಇದೊಂದು ಗಂಭೀರವಾದಂಥ ಸಮಸ್ಯೆಯಾಗಿದ್ದು ಇವತ್ತು ಎಂತಹ ಸ್ಥಿತಿಗೆ ಬಂದಿದೆ ಎಂದರೆ, ಇದೊಂದು ರಾಷ್ಟ್ರೀಯ ವಿಚಾರವಾಗಿ ಅವರು ಈಗ ಇದಕ್ಕೆ ಪ್ರಾಧಿಕಾರ ಮಾಡಬೇಕು ಅದನ್ನು ತೀರ್ಮಾನ ಮಾಡಬೇಕು ಎನ್ನುವ ತೀರ್ಮಾನಕ್ಕೆ ಗೋವಾದವರು ಬಂದಿದ್ದಾರೆ. ನಮ್ಮ ನೀರನ್ನು ನಾವು ಕುಡಿಯುವುದಕ್ಕೆ, ಉಪಯೋಗಿಸಿಕೊಳ್ಳುವುದಕ್ಕೆ ಸಿಡಬ್ಲ್ಯೂಸಿ ರೂಲ್ಸ್ ಪ್ರಕಾರ ಬಹಳ ಸ್ಪಷ್ಟವಾಗಿದೆ. ಸೆಂಟ್ರಲ್ ಗೌರ್ನಮೆಂಟ್‌ನಲ್ಲಿ ಕುಡಿಯುವ ನೀರಿಗೋಸ್ಕರ ಉಪಯೋಗ ಮಾಡತಕ್ಕಂಥ ಸಂದರ್ಭದಲ್ಲಿ ಯಾವ ರಾಜ್ಯವೂ ತಕರಾರು ಎತ್ತಬಾರದು ಎನ್ನತಕ್ಕಂಥದ್ದು ಒಂದು ಸ್ಟ್ಯಾಂಡಿಂಗ್ ಇದೆ ಕೇಂದ್ರ ಮತ್ತು ರಾಜ್ಯ ಸರ್ಕಾರದಲ್ಲಿ. ತೆಲಗು-ಗಂಗಾ ಪ್ರಾಜೆಕ್ಟನ್ನು ತಂದಂಥ ಸಂದರ್ಭದಲ್ಲಿ ನಾವು 5 ಟಿಎಂಸಿ ನೀರನ್ನು ತಮಿಳುನಾಡಿಗೆ ಕೊಟ್ಟಿದ್ದೇವೆ. ಅದರ ಬಗ್ಗೆ ಎಲ್ಲೂ ತೀರ್ಮಾನವಾಗಿಲ್ಲ ಚರ್ಚೆಯಾಗಿಲ್ಲ. ಕುಡಿಯುವ ನೀರಿನ ಪ್ರಶ್ನೆ ಬಂದಾಗ ಯಾವುದೇ ಸಂದರ್ಭದಲ್ಲಿ ಈ ರೀತಿಯಾಗಿರತಕ್ಕಂಥ ಸ್ಥಿತಿಯನ್ನು ನಾವು ಕಂಡಿರಲಿಲ್ಲ.

ಶ್ರೀ ಬಸವರಾಜ ರಾಯರೆಡ್ಡಿ : ಕೃಷ್ಣಾ ಟ್ರಿಬ್ಯುನಲ್ ಬಂದಂಥ ಸಂದರ್ಭದಲ್ಲಿ 5 ಟಿಎಂಸಿ ನೀರನ್ನು ನಾವು ವಾಲೆಂಟೆರಿಯಾಗಿ ಬಿಟ್ಟುಕೊಟ್ಟಿದ್ದೇವೆ. We have shown the magnanimity.

ಶ್ರೀ ಜಿ.ವಿ. ಶ್ರೀರಾಮ್‌ರೆಡ್ಡಿ : ನಾನೂ ಕೂಡ ಅದನ್ನೇ ಹೇಳುತ್ತಿರುವುದು. ನಾನು ಅದರ ಬಗ್ಗೆ ಮಾತನಾಡುತ್ತಿದ್ದೇನೆ. 5 ಟಿಎಂಸಿ ನೀರನ್ನು ಕುಡಿಯುವ ನೀರಿನ ಸಲುವಾಗಿ ಕೊಟ್ಟಿದ್ದು ನಮ್ಮ ಉದಾರವಾದ ದೃಷ್ಟಿಯಿಂದ. ಅಷ್ಟು ಕನಿಷ್ಟ ಪ್ರಜ್ಞೆ ಗೋವಾ ಸರ್ಕಾರಕ್ಕೆ ಇಲ್ಲ. ಸೌಜನ್ಯವಿಲ್ಲ. ನಾವು ಕುಡಿಯುವ ನೀರಿಗೆ ಈಗ ಸುಮಾರು 10–12 ತಾಲ್ಲೂಕುಗಳು ಹುಬ್ಬಳ್ಳಿ–ಧಾರವಾಡ ಎಲ್ಲಾ ಕಡೆಗಳಲ್ಲಿ ಬರಗಾಲ ಇದ್ದು ಕುಡಿಯುವುದಕ್ಕೆ ನೀರು ಬೇಕು ಎಂದು ಹೇಳಿದರೆ ಅಷ್ಟು ಸೌಜನ್ಯ ತೋರದೆ ಇರತಕ್ಕಂಥ ಗೋವಾ ಸರ್ಕಾರ ಮತ್ತು ವಿನಾಕಾರಣ ತಡೆ ಹಾಕಿರತಕ್ಕಂಥ ಕೇಂದ್ರ ಸರ್ಕಾರಗಳಿಗೆ ಇವತ್ತು ನಾವು ಛೀಮಾರಿ ಹಾಕಬೇಕಾಗುತ್ತದೆ. ನಮ್ಮ ಕ್ರಮವನ್ನು ತಾವು ತೆಗೆದುಕೊಳ್ಳಬೇಕಾಗುತ್ತದೆ. ಹಿಂದಿನ ಸಭೆಯಲ್ಲಿ ಕೂಡ ನಾವು ಚರ್ಚೆ ಮಾಡಿದಂಥ ಸಂದರ್ಭದಲ್ಲಿ ಹಲವಾರು ಅಭಿಪ್ರಾಯಗಳು ಬಂದಿತ್ತು. ಅದರಲ್ಲಿ ಒಂದು ಅಭಿಪ್ರಾಯ ಏನಿತ್ತು ಅನುಮತಿಯನ್ನು ಪಡೆಯದೆ ನಾವು ಕೆಲಸವನ್ನು ಶುರು ಮಾಡೋಣ. ಏನು ಮಾಡುತ್ತಾರೋ ನೋಡೋಣ ಎನ್ನುವ ಸ್ಥಿತಿ ಕೂಡ ಬಂದಿತ್ತು. ಆದರೆ ನಾವು ಆ ರೀತಿ ದುಡುಕುವುದು ಬೇಡ. ಎರಡು ರಾಜ್ಯಗಳ ಸಂಬಂಧ ಕೆಡುತ್ತದೆ ಎನ್ನುವ ದೃಷ್ಟಿಯಲ್ಲಿ ಅದನ್ನು ಸಾವಧಾನವಾಗಿಬಿಟ್ಟರೆ ಇವತ್ತು ಸ್ಥಿತಿ ಎಷ್ಟು ಗಂಭೀರವಾಗಿದೆ ನೋಡಿ. ಅವರು ಪ್ರಾಧಿಕಾರ ರಚನೆ ಮಾಡಿ ಎಂದು ಕೇಳುತ್ತಿದ್ದಾರೆ – as if there is a serious dispute.

ನಮ್ಮ expectation ಏನಿತ್ತು ಮಹದಾಯಿ ನದಿಯಿಂದ 20 ಟಿಎಂಸಿ ನೀರು ಸಿಗುತ್ತದೆಂದು, ಇಲ್ಲವೆಂದರೆ ಕನಿಷ್ಟ 7.5 ಟಿಎಂಸಿ ನೀರನ್ನು ಕುಡಿಯುವುದಕ್ಕೆ ಉಪಯೋಗಿಸಿಕೊಳ್ಳಬಹುದು ಎಂದು. ಅದಕ್ಕಿಂತ ಕಡಿಮೆ ನೀರು ನಮಗೆ ಸಿಗುವುದಿಲ್ಲವೆಂದು ಹೇಳಿ, ನಾವು ಸ್ಪಷ್ಟವಾಗಿ ಹೇಳಿದಾಗಲೂ ಕೂಡ ಕುಡಿಯುವ ನೀರಿನ ಯೋಜನೆಯಲ್ಲಿ ಗೋವಾ ಸರ್ಕಾರ ಏನು ತಕರಾರು ತೆಗೆದಿದೆ ಅವರ ತಾಳಕ್ಕೆ ಕೇಂದ್ರ ಸರ್ಕಾರ ಏನು ಕುಣಿಯುತ್ತಿದೆ ಇದು ರಾಜ್ಯಕ್ಕೆ ಮಾಡಿರುವಂಥ ಅನ್ಯಾಯ. ಇದನ್ನು ಸರಿಪಡಿಸಬೇಕು. ಅದನ್ನು ಸರಿಪಡಿಸಬೇಕಾದರೆ ಎಲ್ಲಾ ರಾಜಕೀಯ ಪಕ್ಷದವರನ್ನು ವಿಶ್ವಾಸಕ್ಕೆ

ತೆಗೆದುಕೊಂಡು ರಾಜ್ಯ ಸರ್ಕಾರ ಪ್ರಯತ್ನ ಮಾಡಬೇಕೆಂದು ನಾನು ಒತ್ತಾಯವನ್ನು ಮಾಡುತ್ತೇನೆ.

ಅಧ್ಯಕ್ಷರು : ಮಾನ್ಯ ಮುಖ್ಯಮಂತ್ರಿಗಳು ಬಂದಮೇಲೆ ಉತ್ತರವನ್ನು ಕೊಡಿಸುತ್ತೇನೆ. ಆಮೇಲೆ ತೆಗೆದುಕೊಳ್ಳೋಣ. ಈಗ ಬಿಲ್ಸ್ ತೆಗೆದುಕೊಳ್ಳೋಣ.

ಶ್ರೀ ಜೆ.ಸಿ.ಮಾಧುಸ್ವಾಮಿ : ಬಿಲ್ಸ್ ತೆಗೆದುಕೊಳ್ಳುವುದಾದರೆ ನಾವು ಭಾಗವಹಿಸುತ್ತೇವೆ. ಇಲ್ಲವೆಂದರೆ ಈ ವಿಷಯದ ಮೇಲೆ ನಾವು ಆಮೇಲೆ ಮಾತನಾಡುತ್ತೇವೆ.

ಶ್ರೀ ಸಿ.ಸಿ. ಪಾಟೀಲ : ಮಾನ್ಯ ಅಧ್ಯಕ್ಷರೆ, ನಾವು ಆ ಭಾಗದಿಂದ ಬಂದಿರುವಂಥ ಶಾಸಕರು, ನನಗೆ ಒಂದು ನಿಮಿಷ ಮಾತನಾಡಲು ಅವಕಾಶವನ್ನು ಮಾಡಿಕೊಡಬೇಕು.

ಅಧ್ಯಕ್ಷರು : ನಾನು ನಿಮಗೆ ಆಮೇಲೆ ಮಾತನಾಡಲು ಅವಕಾಶವನ್ನು ಮಾಡಿಕೊಡುತ್ತೇನೆ.

(ಆ) ವಿಷಯ : ಬಾಬು ಜಗಜೀವನ್ ರಾಮ್ ಅವರ 99ನೇ ಜನ್ಮದಿನಾಚರಣೆ ಪ್ರಯುಕ್ತ ರಜೆ ಕೊಡುವುದು ಮತ್ತು ಪ್ರತಿಮೆಯನ್ನು ಅನಾವರಣ ಮಾಡುವ ಬಗ್ಗೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಬಾಬು ಜಗಜೀವನ್‌ರಾಮ್‌ರವರ 99ನೇ ಜನ್ಮದಿನಾಚರಣೆ ಇವತ್ತು ಇದೆ. ಜನ್ಮದಿನಾಚರಣೆಯ ಸಂದರ್ಭದಲ್ಲಿ ತಾವು ರಜೆಯನ್ನು ಕೊಡಬೇಕು ಲೆಕ್ಕದಿಂದ ನೋಡಿದರೆ. 5 ಗಂಟೆಗೆ ಇಲ್ಲಿ ಸಮಾರಂಭವನ್ನು ಇಟ್ಟುಕೊಂಡಿದ್ದೀರಿ. ಇದು ಬಹಳ ಪ್ರಾಮುಖ್ಯವಾದಂಥದ್ದು, ತಮ್ಮಲ್ಲಿ ಅತ್ಯಂತ ಕಳಕಳಿಯಿಂದ ಮನವಿ ಮಾಡುತ್ತೇನೆ. ಜನ್ಮದಿನಾಚರಣೆಯ ದಿವಸ ಇವತ್ತು ಸದನ ನಡೆಸತಕ್ಕಂಥದ್ದು ಸರಿಯಾದದ್ದಲ್ಲ. ರಾಜ್ಯ ಸರ್ಕಾರ ರಜೆಯನ್ನು ಘೋಷಣೆ ಮಾಡಬೇಕು ಮತ್ತು ಬಾಬು ಜಗಜೀವನ್‌ರಾಮ್‌ರವರ ಪ್ರತಿಮೆ ಅನಾವರಣ ಆಗಬೇಕು.

(ಗೊಂದಲ)

(ಈ ಹಂತದಲ್ಲಿ ಡಾ: ಆರ್. ಬಿ. ಶಿರಿಯಣ್ಣನವರು ಹಾಗೂ ಸಿ.ಸಿ. ಪಾಟೀಲ್‌ರವರು ಕಳಸಾ–ಬಂಡೂರಿ ಬಗ್ಗೆ ಮಾತನಾಡಲು ಅವಕಾಶ ಕೊಡಿ ಎಂದು ಸದನದ ಬಾವಿ ಹತ್ತಿರ ಬಂದು ವಾಪಸ್ಸು ಹೋದರು)

(ಗೊಂದಲ)

ಶ್ರೀ ಬಸವರಾಜ ಹೊರಟ್ಟಿ : ಬಿಎಸಿ ಕಮಿಟಿಯಲ್ಲಿ ಸದನ ನಡೆಸಿ ಎಂದು ಚರ್ಚೆಯಾದಾಗ ನೀವು ಒಪ್ಪಿಕೊಂಡು ಇಂದು ಈ ತರಹ ಮಾತನಾಡುತ್ತೀರಿ.